


ಕಾಫಿಯ ಘಮ




ಘಂ ಎನ್ನುತ್ತಿದೆ ಕಿತ್ತಳೆ

ಅಗರ್‌ವುಡ್ ಅನ್ನು ಸೂಕ್ಷ್ಮ ಕುಸುರಿ ಕೆತ್ತನೆಗೂ ಬಳಸಲಾಗುತ್ತದೆ.

ನೆರೆಯ ಭೂತಾನ್ ಮೊದಲ ಬಾರಿಗೆ (1973ರಲ್ಲಿ) ಇಂಥ ಪರಿಮಳದ (ಅರೋಮ್ಯಾಟಿಕ್) ಅಂಚೆ ಚೀಟಿಗಳನ್ನು ಹೊರತಂದಿತ್ತು. ನಂತರದ ವರ್ಷಗಳಲ್ಲಿ ನ್ಯೂಜಿಲೆಂಡ್, ಥಾಯ್ಲೆಂಡ್, ಫ್ರಾನ್ಸ್, ಹಂಗೆರಿ, ಸ್ವಿಜರ್ಲೆಂಡ್ ಕೂಡ ಇಂಥ ಪ್ರಯತ್ನ ಮಾಡಿದವು.

ಭಾರತದಲ್ಲಿ ಕಂಪು ಬೀರುವ ಸ್ಟ್ಯಾಂಪುಗಳು ಹೊರಬಂದಿರುವುದು ಹೊಸದೇನಲ್ಲ. ಅಂಚೆ ಇಲಾಖೆ, 2006ರಲ್ಲಿ ಮೊದಲ ಬಾರಿ ಶ್ರೀಗಂಧದ ಕಂಪು ಸೂಸುವ ಅಂಚೆ ಚೀಟಿಗಳನ್ನು ಹೊರತಂದಿತ್ತು. ಇದರ ಮುಖಬೆಲೆ ₹ 15. ಮರು ವರ್ಷ ಗುಲಾಬಿಗಳ ಚಿತ್ರವಿರುವ ನಾಲ್ಕು ಅಂಚೆ ಚೀಟಿಗಳು ಬಿಡುಗಡೆಯಾದವು. ಭೀಮ್, ಜವಾಹರ, ನೀಲಂ, ಡೆಲ್ಲಿ ಪ್ರಿನ್ಸಸ್ ಹೆಸರಿನ ಗುಲಾಬಿಗಳ ಚಿತ್ರಗಳಿದ್ದವು. 2008ರಲ್ಲಿ ಮಲ್ಲಿಗೆಯ ಪರಿಮಳವಿರುವ ಅಂಚೆ ಚೀಟಿಯೂ ಹೊರಬಂದಿತು. ನಂತರ ಬಂದಿದ್ದೇ ಕಾಫಿ ಪರಿಮಳದ ಅಂಚೆ ಚೀಟಿ. ₹ 100 ಮುಖಬೆಲೆಯ ಈ ಅಂಚೆ ಚೀಟಿ, ಲಕೋಟೆಯನ್ನು (first day cover) ಬೆಂಗಳೂರಿನಲ್ಲಿ 2017ರಲ್ಲಿ ಬಿಡುಗಡೆ ಮಾಡಲಾಗಿತ್ತು.

ಘಮ ಚೆಲ್ಲುವ ಅಂಚೆ ಚೀಟಿಗಳು ಕನ್ನಡದ ಸೊಗಡನ್ನೂ ಬಿಂಬಿಸುವಂತಿವೆ. ಮಲ್ಲಿಗೆ ಹಾಗೂ ಶ್ರೀಗಂಧಕ್ಕೆ ಕನ್ನಡ ಸಂಸ್ಕೃತಿಯ ಜತೆ ವಿಶೇಷ ನಂಟು. ಕನ್ನಡದ ಕಂಪಿನ ಈ ನಂಟು ಅಂಚೆಚೀಟಿಗಳ ಮೂಲಕ, ಅಂಚೆಚೀಟಿಗಳ ಸಂಗ್ರಾಹಕರ ಮೂಲಕ ಅಂತರರಾಷ್ಟ್ರೀಯ ಮಟ್ಟದಲ್ಲಿ ಆವರಿಸಿಕೊಂಡಿದೆ.

